ದಿಃ 27-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಎಸ್.ಕೆ. ವಕೀಲರಿಂದ ಎದುರುದಾರರ ಪರವಾಗಿಃ**

15. ನಮ್ಮ ಫ್ಯಾಕ್ಟರಿಯು ವರ್ಷದಲ್ಲಿ 03-04 ತಿಂಗಳು ಬಂದ್ ಇದ್ದು, ಬಾಕಿ ತಿಂಗಳಗಳಲ್ಲಿ running ನಲ್ಲಿ ಇರುತ್ತದೆ ಅಂದರೆ ನಿಜ. 03-04- ತಿಂಗಳು ಬಂದ್ ಇದ್ದ ಅವಧಿಯಲ್ಲಿ ನಾವು ಕಾರ್ಮಿಕರಿಗೆ ಸಂಬಳ ಕೊಡುತ್ತಿರಲಿಲ್ಲ ಅಂದರೆ ಸುಳ್ಳು. ಇದೇ ವಿಚಾರವಾಗಿ ಕಾರ್ಮಿಕ ಅಧಿಕಾರಿಯೊಂದಿಗೆ ಸಂಧಾನ ನಡೆಯಿತು ಅಂದರೆ ಸುಳ್ಳು. ಈ ವಿಚಾರಕ್ಕಾಗಿ ಸಂಧಾನ ನಡೆದಿದ್ದರೂ ಸಹ ಕನ್ನಡದ ಕಾರ್ಮಿಕರನ್ನು ಕೆಲಸದಿಂದ ತೆಗೆದಿದ್ದಕ್ಕೆ ಸಂಧಾನ ಆಗಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಎಲ್ಲಾ ಅರ್ಜಿದಾರರಿಗೆ ದಿಃ 06-08-2019 ರಂದು ಕೆಲಸದಿಂದ ತೆಗೆದಿದ್ದಾರೆ ಅಂದರೆ ನಿಜ. ಯಾವ ಕಾರಣಕ್ಕೆ ಕೆಲಸದಿಂದ ತೆಗೆದಿದ್ದಾರೆ ಅಂತ ನಮ್ಮ ಎಲ್ಲರಿಗೂ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಫ್ಯಾಕ್ಟರಿಯೂ ಸಂಜೆ 6.00-7.00 ಗಂಟೆಗೆ ಬಂದ್ ಆಗುತ್ತದೆ ಅಂದರೆ ಸರಿಯಲ್ಲ. ಸಾಕ್ಷಿದಾರರು ಹೇಳುತ್ತಾರೆ ರಾತ್ರಿ 9.00-10.00 ಗಂಟೆಗೆ ಬಂದ್ ಆಗುತ್ತದೆ. ಫ್ಯಾಕ್ಟರಿಯ ಸಾಹುಕಾರ, ಮ್ಯಾನೇಜರ್ ಸಂಜೆ 6.00 ಗಂಟೆಗೆ ಮನೆಗೆ ಹೋಗುತ್ತಿದ್ದರು ಅಂದರೆ ನಿಜ. ರಾತ್ರಿ ಹೊತ್ತು ವಾಚಮ್ಯಾನ್ ಮಾತ್ರ ಇರುತ್ತಿದ್ದರು ಅಂದರೆ ನಿಜ.

ನಾನು ಗೊಲ್ಲರಹಟ್ಟಿಯಲ್ಲಿ ವಾಸವಿದ್ದೇನೆ. 2 ರಿಂದ 4 ನೇ ಅರ್ಜಿದಾರರು ಮಲ್ಲಶೆಟ್ಟಿಹಳ್ಳಿಯಲ್ಲಿ ವಾಸವಾಗಿರುತ್ತಾರೆ ಅಂದರೆ ನಿಜ. ಈ ಫ್ಯಾಕ್ಟರಿ ಸಹ ಮಲ್ಲಶೆಟ್ಟಿಹಳ್ಳಿಯಲ್ಲಿಯೇ ಇರುತ್ತದೆ ಅಂದರೆ ನಿಜ. ಗೊಲ್ಲರಹಟ್ಟಿಯಿಂದ ಮಲ್ಲಶೆಟ್ಟಿಹಳ್ಳಿ 02 ಕಿ.ಮೀ. ಅಂತರವಿದೆ. ಅರ್ಜಿದಾರರು ರಾತ್ರಿ ಪಾಳೆ ಕೆಲಸಕ್ಕೆ ಬರುತ್ತಿದ್ದರು ಅಂದರೆ ನಿಜ. ರಾತ್ರಿ ಹೊತ್ತು ಮ್ಯಾನೇಜರ್ ಮತ್ತು ಸಾಹುಕಾರ ಇಲ್ಲದೇ ಇರುವುದರಿಂದ ನಾವು ಅರ್ಜಿದಾರರು ಇಸ್ಪೇಟ್ ಆಡುತ್ತಿದ್ದೆವು ಮತ್ತುಕುಡಿದು ಗಲಾಟೆ ಮಾಡುತ್ತಿದ್ದೆವು ಅಂದರೆ ಸುಳ್ಳು. ಮ್ಯಾನೇಜರ್ ರವರು ಹೇಳಿದಂತಹ ಆದೇಶವನ್ನು ನಾವು ಯಾರೂ ಪಾಲನೆ ಮಾಡುತ್ತಿರಲಿಲ್ಲ ಅಂದರೆ ಸುಳ್ಳು. ನಮ್ಮ ಫ್ಯಾಕ್ಟರಿಯಲ್ಲಿ ಹಾಜರಾತಿಗಾಗಿ Biometric ಇರುತ್ತದೆ. ನಾವು 04

ಜನ ಅರ್ಜಿದಾರರು ಕೆಲಸಕ್ಕೆ ಬರಬೇಕಾದರೆ Biometric ನಲ್ಲಿ ಹಾಜರಾತಿ ಕೊಡುತ್ತಿದ್ದೆವು, ಆದರೆ ಫ್ಯಾಕ್ಟರಿಯಿಂದ ಆಚೆ ಬರುವ ಕಾಲಕ್ಕೆ Biometric ಕೊಡುತ್ತಿರಲಿಲ್ಲ ಅಂದರೆ ಸುಳ್ಳು. ನಾವು ರಾತ್ರಿ ಫ್ಯಾಕ್ಟರಿಯಲ್ಲಿ ಇರದೇ ಬೆಳಿಗ್ಗೆ ಸಮಯದಲ್ಲಿ ಮಾಲೀಕರು ಯಾವಾಗೋ ಬರುತ್ತಿದ್ದರೋ ಅವರು ಬರುವಕ್ಕಿಂತ ಮುಂಚಿತವಾಗಿ ಫ್ಯಾಕ್ಟರಿಗೆ ಹಾಜರಾಗುತ್ತಿದ್ದೆವು ಅಂದರೆ ಸುಳ್ಳು. ನಮ್ಮ ಫ್ಯಾಕ್ಟರಿಯ ರಹಸ್ಯಗಳನ್ನು ಹೊರಗಿನವರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದೆವು ಅಂದರೆ ಸುಳ್ಳು. ಆಡಳಿತ ಮಂಡಳಿಯವರು ಎಲ್ಲಾ ಅರ್ಜಿದಾರರಿಗೆ ಇಂತಹ ನಡುವಳಿಕೆಗಳನ್ನು ಬದಲಾಯಿಸಿಕೊಳ್ಳಲು ಹೇಳುತ್ತಿದ್ದರು ಅಂದರೆ ಸುಳ್ಳು. ನಮ್ಮ ವರ್ತನೆಯನ್ನು ನಾವು ಬದಲಾವಣೆ ಮಾಡದೇ ಇರುವುದರಿಂದ ಎಲ್ಲಾ ಅರ್ಜಿದಾರರನ್ನು ಕೆಲಸದಿಂದ ತೆಗೆದಿದ್ದಾರೆ ಅಂದರೆ ಸುಳ್ಳು. ಮಾಲೀಕರೊಂದಿಗೆ ಆ ಸಮಯದಲ್ಲಿ ಭೇಟಿ ಆಗುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

16. ಗ್ರಾಮ ಪಂಚಾಯಿತಿಯ ಮುಖಂಡರು ಸಹ ಮಾಲೀಕರಿಗೆ ಭೇಟಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ಪುನಃ ಹೇಳುತ್ತೇನೆ ಸರಿಯಲ್ಲ. ನಮಗೆ ಕೆಲಸದಿಂದ ವಜಾ ಆದ ನಂತರ ನಾವು ಕಾರ್ಮಿಕರ ಅಧಿಕಾರಿಗಳಿಗೆ ದಿಃ 31-10-2019 ರಂದು ಅರ್ಜಿ ಕೊಟ್ಟಿದ್ದೇವೆ ಅಂದರೆ ನಿಜ. ಕಾರ್ಮಿಕ ಅಧಿಕಾರಿಗಳಿಗೆ ದಿಃ 31-10-2019 ರಂದು ಅರ್ಜಿ ಕೊಟ್ಟಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಈಗ ನನಗೆ ತೋರಿಸಿದ ನಿಪಿ-23 ರಲ್ಲಿ ಎರಡನೇ ಪುಟದ ಕ್ರಮ ಸಂಖ್ಯೆ 9 ಆದ ನಂತರ " ನಮಗೆ ಏಕಾ ಏಕಿ ಕೆಲಸದಿಂದ ವಜಾ ಮಾಡಿರುವುದರಿಂದ ನಮಗೆ ಬರಬೇಕಾದ Gratuity, ಹೆಚ್ಚುವರಿ ವೇತನ, ಕನಿಷ್ಟ ವೇತನ ಹಾಗೂ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇವೆ " ಎಂಬುವುದಾಗಿ ಬರೆಸಿದ್ದೇನೆ ಅಂದರೆ ನಿಜ. ಸದರಿ ಭಾಗವನ್ನು ನಿಪಿ-23 ರಲ್ಲಿ ನಿಪಿ-23(ಎ) ಅಂತ ಗುರುತಿಸಲಾಯಿತು. ಕಾರ್ಮಿಕರು ಕೆಲಸ ಬಿಟ್ಟ ನಂತರ Gratuity ನೀಡಲಾಗುತ್ತದೆ ಹಾಗೂ ಕಾರ್ಮಿಕರು ಕನಿಷ್ಟ 05 ವರ್ಷಗಳಷ್ಟು ಕೆಲಸ ಮಾಡಿರಬೇಕು. ಕೆಲಸದಿಂದ ಬಿಡಿಸಿದರೆ ನಾವು ಪರಿಹಾರ ಪಡೆಯಲು ಅರ್ಹರಾಗಿರುತ್ತೇವೆ. ನಿಪಿ-23 ರಲ್ಲಿ ಕೆಲಸಕ್ಕೆ ನಮ್ಮನ್ನು ಪುನಃ

ತೆಗೆದುಕೊಳ್ಳಬೇಕೆಂಬುವುದಾಗಿ ಬರೆಸಿಲ್ಲ ಅಂದರೆ ಸುಳ್ಳು. ಈಗ ನಾನು ಓದಿದ ನಿಪಿ-23ರಲ್ಲಿ ನಮ್ಮನ್ನು ಕೆಲಸಕ್ಕೆ ಪುನಃ ತೆಗೆದುಕೊಳ್ಳಬೇಕೆಂಬುವುದಾಗಿ ಬರೆದಿಲ್ಲ. ನಿಪಿ-23 ಕೊಡುವ ಪೂರ್ವದಲ್ಲಿ ನಾವು ನೋಟೀಸ್ಸನ್ನು ಕೊಟ್ಟಿರುವುದಿಲ್ಲ. ನಿಪಿ-23ರ ಅರ್ಜಿಗೆ ಮಾಲೀಕರು ಹಾಜರಾಗಿ ತಕರಾರನ್ನು ಸಲ್ಲಿಸಿದ್ದಾರೆ ಅಂದರೆ ನಿಜ. ತಮ್ಮ ತಕರಾರಿನಲ್ಲಿ ಮಾಲೀಕರು ಅರ್ಜಿದಾರರಿಗೆ ಮುಂದೆ ತೊಂದರೆಯಾಗಬಾರದು ಅಂತ ದುರ್ನಡತೆ ಕಾರಣಗಳು ನಿಪಿ-23ರ ತಕರಾರಿನಲ್ಲಿ ಬರೆದಿರುವುದಿಲ್ಲ ಅಂದರೆ ಸುಳ್ಳು. ಮಾಲೀಕರು ತಕರಾರು ಹಾಕಿದ ನಂತರ ಅರ್ಜಿದಾರರು ಅವರಿಗೆ ಯಾವ ದುರ್ನಡತೆ ಮಾಡಿದ್ದೇವೆ ಅಂತ ಕೇಳಲು ಭೇಟಿ ಆಗಿದ್ದೇವೆ. ಆ ರೀತಿ ನಾವು ಮಾಲೀಕರನ್ನು ಭೇಟಿಯಾಗಿಲ್ಲ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

17. ಮಾಲೀಕರು ತಕರಾರು ಹಾಕಿದ ನಂತರ ನಾವು ನಿಪಿ-22ರಂತೆ ಪುನರ್ ಅರ್ಜಿ (Rejoinder) ಹಾಕಿದ್ದೇವೆ ಅಂದರೆ ನಿಜ. ಆ ಪುನರ್ ಅರ್ಜಿಯಲ್ಲಿ ನಾವು ಮಾಲೀಕರಿಗೆ ಭೇಟಿಯಾಗಿದ್ದು ಮತ್ತು ದುರ್ನಡತೆಯ ಕಾರಣಗಳ ಬಗ್ಗೆ ವಿಚಾರಿಸಿರುವ ಬಗ್ಗೆ ಬರೆಸಿಲ್ಲ ಅಂದರೆ ಸರಿಯಲ್ಲ. ಸದರಿ ಪುನರ್ ಅರ್ಜಿಯಲ್ಲಿ ನಾನು ಆ ರೀತಿ ಬರೆಸಿಲ್ಲ ಅಂದರೆ ಸರಿಯಲ್ಲ. ನಮ್ಮ ದುರ್ನಡತೆ ಕಾರಣದಿಂದ ನಮ್ಮನ್ನು ಕೆಲಸದಿಂದ ತೆಗೆದು ಹಾಕಲಾಯಿತು ಅಂದರೆ ಸುಳ್ಳು. ಫ್ಯಾಕ್ಟರಿಯಲ್ಲಿ ನಾವು ಎಲ್ಲಾ ಅರ್ಜಿದಾರರು ರೌಡಿ ಸಮ್ ಮಾಡುತ್ತಿದ್ದರಿಂದ ನಮ್ಮನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಅಂದರೆ ಸುಳ್ಳು. ಕಾರ್ಮಿಕ ಅಧಿಕಾರಿಯವರಿಗೆ ಅರ್ಜಿಯನ್ನು ಸಲ್ಲಿಸಿದ ನಂತರ ಕನಿಷ್ಟ ವೇತನ ನೀಡಬೇಕೆಂದು ಆಯುಕ್ತರ ಕಛೇರಿಗೆ ಅರ್ಜಿ ಸಲ್ಲಿಸಿದೆವು ಅಂದರೆ ನಿಜ. ಸದರಿ ಪ್ರಕರಣದಲ್ಲಿ ಮಾಲೀಕರ ಪರವಾಗಿ ಅವರ ಪ್ರತಿನಿಧಿ ಹಾಜರಾಗುತ್ತಿದ್ದರು ಅಂದರೆ ನಿಜ. ಪ್ರತಿನಿಧಿ ಮಾಲೀಕರ ಪರವಾಗಿ ಬರಕೂಡದು ಮಾಲೀಕರೆ ಬರಬೇಕು ಅಂತ ನಾವು 4 ಜನರು ಆಯುಕ್ತ ಕಛೇರಿಯಲ್ಲಿ ಗಲಾಟೆ ಮಾಡುತ್ತಿದ್ದೆವು ಅಂದರೆ ಸುಳ್ಳು. ಸಾಕ್ಷಿದಾರರು ಹೇಳುತ್ತಾರೆ ನಾವು ಮಾಲೀಕರೇ ಬರಬೇಕು ಅಂತ ಕೇಳಿಕೊಂಡಿದ್ದೇವೆ. ಸದರಿ ಕನಿಷ್ಟ ವೇತನ ಅರ್ಜಿಯಲ್ಲಿ ಮಾಲೀಕರು ಹಾಜರಾಗಿ ಕನಿಷ್ಟ ವೇತನ ನೀಡಿದ್ದಾರೆ ಅಂದರೆ ನಿಜ.

18. ಯಾವುದೇ ಕಾರಣ ಇಲ್ಲದೇ ನಮ್ಮನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಅಂತ ನಾನು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಅರ್ಜಿದಾರರ ವರ್ತನೆಯಿಂದ ಸಂಸ್ಥೆ ಹಾಳಾಗಬಾರದು ಅಂತ ನಮ್ಮನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಅಂದರೆ ಸುಳ್ಳು. ಈಗಲೂ ಸಹ ಮಾಲೀಕರು ಕಾನೂನು ಬದ್ದವಾಗಿ ಪರಿಹಾರ ಕೊಡಲು ಸಿದ್ದರಿದ್ದಾರೆ ಅಂದರೆ ಆ ಬಗ್ಗೆ ನಮಗೆ ಮಾಹಿತಿ ಇಲ್ಲ.

ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುವುರಿದಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.